ದಿನಾಂಕಃ 10.07.2023
ಡಿಡಬ್ಲ್ಯೂ1
ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಿಂದಃ

ನಾನು ಈ ದಿನ ನನ್ನ ಪರವಾಗಿ ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ ಃ-

1. ಎರಡು ಇ - ಖಾತಾಗಳನ್ನು ಈಗ ಕ್ರಮವಾಗಿ ನಿಡಿ.8 ಮತ್ತು ನಿಡಿ.9 ಎಂತಲೂ,
2. ಎರಡು ಕಂದಾಯ ರಶೀದಿಗಳನ್ನು ಕ್ರಮವಾಗಿ ನಿಡಿ.10 ಮತ್ತು ನಿಡಿ.11 ಎಂತಲೂ,
3. ಎರಡು ವಿದ್ಯುಚ್ಚಕ್ತಿ ಪಾವತಿ ಬಿಲ್‌ಗಳನ್ನು ಕ್ರಮವಾಗಿ ನಿಡಿ.12 ಮತ್ತು ನಿಡಿ.13 ಎಂದು ಗುರುತಿಸಲಾಯಿತು.

ಪಾಟೀ ಸವಾಲು ಃ

(ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.)
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಬಿ.ಎನ್.ಉಷಾರಾಣಿ)
ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ಸಿ
ಚನ್ನಪಟ್ಟಣ.

ದಿನಾಂಕಃ 16.08.2023

(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)

ಡಿಡಬ್ಲ್ಯೂ 1

<u>ಪಾಟೀ ಸವಾಲುಃ ವಾದಿ ಪರ ಶ್ರೀ.ಎಂಕೆಎನ್., ವಕೀಲರಿಂದಃ</u>

2. ನಾನು ವಿನಾಯಕನಗರ, ತಟ್ಟೆಕೆರೆ ಚನ್ನಪಟ್ಟಣದಲ್ಲಿ ವಾಸವಾಗಿದ್ದೇನೆ. ಅದೇ ರೀತಿ ವಾದಿ ಕೂಡ ಮೇಲೆ ಹೇಳಿದ ವಿಳಾಸದಲ್ಲಿಯೇ ವಾಸವಾಗಿದ್ದಾರೆ ಅಂದರೆ ಸರಿಯಲ್ಲ.

3. ನಿಪಿ.10 ನನ್ನ ತಾಯಿ ತಿಥಿ ಕಾರ್ಡ್ ಅಂದರೆ ಸರಿ. ನನ್ನ ತಾಯಿ ತಾಃ13.04.2010 ರಂದು ಮರಣ ಹೊಂದಿದ್ದಾರೆ. ಆ ಬಗ್ಗೆ ಮರಣ ಪ್ರಮಾಣಪತ್ರ ಪಡೆದುಕೊಂಡಿದ್ದೇನೆ. ಸದರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ.

4. ತಾಃ 13.04.2010 ರಂದು ನಿಮ್ಮ ತಾಯಿಯ 11 ದಿನ ಕಾರ್ಯ ಆಯಿತು ಅಂದರೆ ಸರಿಯಲ್ಲ. ತಾಃ13.04.2010 ರಂದು ನಿಮ್ಮ ತಾಯಿ ತೀರಿಕೊಂಡಿಲ್ಲ ಅಂದರೆ ಸರಿಯಲ್ಲ. ತಾಃ 01.04.2010 ರಂದು ನಿಮ್ಮ ತಾಯಿ ತೀರಿಕೊಂಡಿರುವ ಕಾರಣ ನೀವು ನಿಮ್ಮ ತಾಯಿಯ ಮರಣ ಪ್ರಮಾಣಪತ್ರ ಸಲ್ಲಿಸಿಲ್ಲ ಅಂದರೆ ಸರಿಯಲ್ಲ.

5. ನನ್ನ ತಂದೆ ತಾಯಿಗೆ ನಾನು ಮತ್ತು ವಾದಿ ಮಕ್ಕಳು ಅಂದರೆ ನಾನು ಒಬ್ಬಳೇ ಮಗಳು. ವಾದಿಯು ಮೇಲೆ ಹೇಳಿದ ವಿಳಾಸದಲ್ಲಿಯೇ ಆಧಾರಕಾರ್ಡ್ ಪಡೆದಿರುವುದು ಅಂದರೆ ಸರಿಯಲ್ಲ.

6. ನನ್ನ ತಂದೆ ತಾಯಿರವರ ಕಾರ್ಯದಲ್ಲಿ ವಾದಿಯೇ ಎಲ್ಲಾ ವಿಧಿ ವಿಧಾನಗಳನ್ನು ನಿರ್ವಹಿಸಿರುವುದು ಅಂದರೆ ಸರಿಯಲ್ಲ. ನಮ್ಮ ತಾಯಿ ಬದುಕಿದ್ದ ಕಾಲದಲ್ಲಿ ಒಂದೇ ಮನೆ ಇದ್ದಿದ್ದು. ಸದರಿ ಮನೆಯು ದಾವಾ ಷಡ್ಯೂಲ್ ಸ್ವತ್ತು ಆಗಿರುತ್ತದೆ. ನಮ್ಮ ತಾಯಿ ಬದುಕಿದ್ದ ಕಾಲದಲ್ಲಿ ಅವರು ಮಾಡಿದ ದಾಖಲೆ ಸರಿಯಿದೆ ಅಂದರೆ ಸರಿ.

7. ಖಾನೇಷುಮಾರಿ ನಂ.255/75/35 ಉ-ದ 40 ಅಡಿ, ಪೂ-ಪ 30 ಅಡಿಯ ಶೀಟ್ ಮನೆ ಮತ್ತು ಖಾಲಿ ನಿವೇಶನ ಖರೀದಿ ಮಾಡಿದ್ದಾರೆ ಅಂದರೆ ಸರಿ. ಸದರಿ ಸ್ವತ್ತಿನಲ್ಲಿ ನಮ್ಮ ತಾಯಿ ಬದುಕಿದ್ದ ಕಾಲದಲ್ಲಿಯೇ ಸಂಪೂರ್ಣವಾಗಿ

ಮನೆ ನಿರ್ಮಾಣ ಮಾಡಿದ್ದರು. ನಂತರ ಸದರಿ ಸ್ವತ್ತಿನಲ್ಲಿ ನನ್ನ ತಾಯಿ ಬದುಕಿದ್ದ ಕಾಲದಲ್ಲಿಯೇ ಅರ್ಧ ಮನೆ ಮಾರಾಟ ಮಾಡಿದ್ದರು. ಯಾರಿಗೆ ಮಾರಾಟ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ಆ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಡಿಸುತ್ತೀರಾ ಅಂದರೆ ಹಾಜರುಪಡಿಸುತ್ತೇನೆ.

8. ಉಳಿದ ಅರ್ಧ ಮನೆ ನನ್ನ ಹೆಸರಿನಲ್ಲಿದೆ. ಆ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಡಿಸುತ್ತೀರಾ ಅಂದರೆ ಹಾಜರುಪಡಿಸುತ್ತೇನೆ. ಯಾವ ಆಧಾರದ ಮೇಲೆ ನಿಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದೀರಾ ಅಂದರೆ ನನ್ನ ತಾಯಿ ಮರಣ ಹೊಂದಿದ ನಂತರ ನಾನು ಒಬ್ಬಳೇ ಮಗಳಾದ ಕಾರಣ ಖಾತೆ ನನ್ನ ಹೆಸರಿಗೆ ಆಗಿರುತ್ತದೆ.

9. ನಾನು 5ನೇ ತರಗತಿಯವರೆಗೆ ಓದಿದ್ದೇನೆ. ನಮ್ಮ ತಾಯಿ ಖಾನೇಷುಮಾರಿ ನಂ.255/75/35 ಗೆ ಸಂಬಂಧಿಸಿದ ವಿಲ್ ಬರೆದಿರುತ್ತಾರೆ ಅಂದರೆ ಸರಿಯಲ್ಲ. ಈ ಹಂತದಲ್ಲಿ ಸದರಿ ವಿಲ್‌ನಲ್ಲಿರುವ ಅಂಶಗಳನ್ನು ಓದಿ ಹೇಳಾಗಿ ಜಯಲಕ್ಷ್ಮಮ್ಮ ಕೋಂ ಪುಟ್ಟಸ್ವಾಮಿ ಅಂದರೆ ನನ್ನ ತಾಯಿ, ಸುಮಾರು 13 ವಯಸ್ಸಿನ ಮಗಳು - ಮಹಾದೇವಮ್ಮ ಅಂದರೆ ನಾನು, ಸುಮಾರು 15 ವಯಸ್ಸಿನ ಮಗ - ಮಹಾದೇವ ಅಂದರೆ ವಾದಿ ಅಂದರೆ ಸರಿ.

10. ಸದರಿ ಸ್ವತ್ತನ್ನು ಪೇಟೇಚೇರಿ ನಂಜಮ್ಮ ತಾಃ 30.12.1996ರಲ್ಲಿ ನನ್ನ ತಾಯಿ ಖರೀದಿ ಮಾಡಿದ್ದು, ಅದರಂತೆ ನನ್ನ ತಾಯಿ ಹೆಸರಿಗೆ ಖಾತೆ ಆಗಿರುತ್ತದೆ ಅಂದರೆ ಸರಿ. ಸದರಿ ಖಾನೇಷುಮಾರಿ ನಂಬರ್ ಸ್ವತ್ತಿಗೆ ನಿಮ್ಮ ತಾಯಿ ಮರಣ ಶಾಸನ ಬರೆದಿದ್ದಾರೆ ಅಂದರೆ ಸರಿಯಲ್ಲ. ಸದರಿ ಮರಣಶಾಸನ ಪ್ರಕಾರ ನನಗೆ ಮತ್ತು ವಾದಿಗೆ ಸದರಿ ಖಾನೇಷುಮಾರಿ ನಂಬರಿನ ಸ್ವತ್ತನಲ್ಲಿ ಅರ್ಧ ಹಿಸ್ಸೆ ಎಂದು ವಿಲ್ ಬರೆದಿದ್ದಾರೆ ಅಂದರೆ ಸರಿಯಲ್ಲ. ಸದರಿ ವಿಲ್ ಪ್ರಕಾರ ವಾದಿ ಹೆಸರಿಗೆ ಅರ್ಧ ಸ್ವತ್ತು ಖಾತೆಯಾಗಿದೆ ಅಂದರೆ ಸರಿಯಲ್ಲ. ಸದರಿ ವಿಲ್ ಪ್ರಕಾರ ವಾದಿಗೂ ಮತ್ತು ನನಗೂ ಖಾತೆಯಾಗಿದೆ ಅಂದರೆ ಸರಿಯಲ್ಲ. ವಿಲ್ ಮೂಲಕ ಬಂದ ಅರ್ಧ ಸ್ವತ್ತನ್ನು ನೀವು ಬಾಲಾಜಿ ಎನ್ನುವವರಿಗೆ ಮಾರಾಟ ಮಾಡಿದ್ದೀರಾ ಅಂದರೆ ಬಾಲಾಜಿ ಮೂಲಕ ಮಾರಾಟ ಮಾಡಿದ್ದೇನೆ, ಆದರೆ ನನ್ನ ತಾಯಿ ಯಾವುದೇ ವಿಲ್ ಮಾಡಿಲ್ಲ.

11. ಅದೇ ರೀತಿ ವಾದಿಯ ಹೆಸರಿಗೆ ಬಂದಂತಹ ಅರ್ಧ ಹಿಸ್ಸೆಯನ್ನು ಭಾರತಿ ವೆಂಕಟೇಶ ಎನ್ನುವವರಿಗೆ ಮಾರಾಟ ಮಾಡಿದ್ದಾರೆ ಅಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ.

12. ನಾನು ಸದರಿ ಬಾಲಾಜಿರವರಿಗೆ ಮಾರಾಟ ಮಾಡಿದ ಕ್ರಯ ಪತ್ರದಲ್ಲಿ ನನಗೆ ಹೇಗೆ ಬಂತು ಎಂಬ ಬಗ್ಗೆ ನಮೂದು ಮಾಡಿದ್ದು, ಸದರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ.

(ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

<u>(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).</u>

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಬಿ.ಎನ್.ಉಷಾರಾಣಿ )
ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ಸಿ,
ಚನ್ನಪಟ್ಟಣ.